
# ಶ್ರೀರಾಮಕೃಷ್ಣರ ಅಂತಿಮ ದಿನಗಳು

ಸ್ವಾಮಿ ಸೌಖ್ಯಾನಂದ



"ಜಗತ್ತಿನಲ್ಲಿ ಎಂದು ಧರ್ಮಗ್ಲಾನಿಯಾಗುವುದೊ ಅಂದು ನಾನು ಅವತರಿಸಿ ಧರ್ಮದ ಗ್ಲಾನಿಯನ್ನು ಕಳೆದು ಧರ್ಮವನ್ನು ಸ್ಥಾಪಿಸುತ್ತೇನೆ" ಎಂದು ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳಿದ್ದಾನೆ. ಅದೇ ರೀತಿ ಭಗವಂತ ಈ ಜಗತ್ತಿನಲ್ಲಿ ಅವತರಿಸಿ ತನ್ನ ದಿವ್ಯಶಕ್ತಿಯಿಂದ ಅಧರ್ಮವನ್ನು ನಾಶ ಮಾಡಿ ಧರ್ಮಸ್ಥಾಪನೆ ಮಾಡಿರುವುದನ್ನು ನಾವು ನೋಡಿದ್ದೇವೆ. ಹಾಗೆ ಈ ಭುವಿಗೆ ಬಂದ ಅವತಾರಗಳಲ್ಲಿ ಶ್ರೀರಾಮಕೃಷ್ಣರ ಅವತಾರವೂ ಒಂದು. ಇಂದು ಜಗತ್ತಿನೆಲ್ಲೆಡೆ ಶ್ರೀರಾಮಕೃಷ್ಣರನ್ನು ಭಗವಂತನ ಅವತಾರವೆಂದು ಆರಾಧಿಸುತ್ತಿದ್ದಾರೆ. ಭಗವಂತನು ಈ ಭುವಿಗೆ ಮನುಷ್ಯ ರೂಪದಲ್ಲಿ ಬಂದಾಗ ಅವನ ಲೀಲೆ ಅದ್ಭುತವಾಗಿರುತ್ತದೆ, ಅವನ ಕಾರ್ಯವೈಖರಿ ಅದ್ಭುತವಾಗಿರುತ್ತದೆ, ಅವನ ಜೀವನವೇ ಅದ್ಭುತವಾಗಿರುತ್ತದೆ. ಆದ್ದರಿಂದ ಅವತಾರಪುರುಷರ ಜೀವನವನ್ನು ದಿವ್ಯಜೀವನವೆಂದೂ ಅವರ ಕರ್ಮಗಳನ್ನು ದಿವ್ಯಕರ್ಮಗಳೆಂದೂ ಕರೆಯಲಾಗಿದೆ. ಅದರಲ್ಲೂ ಶ್ರೀರಾಮಕೃಷ್ಣರ ಜೀವನವೆಂದರೆ, ದಿವ್ಯ, ವೈವಿಧ್ಯಮಯ ಹಾಗೂ ಭಾವಮಯ ಕೂಡ.

ಇಂತಹ ಭಾವಮಯವಾದ ಶ್ರೀರಾಮಕೃಷ್ಣರ ಜೀವನದುದ್ದಕ್ಕೂ ಅವರ ಅವತಾರಶಕ್ತಿಯನ್ನು ತಿಳಿಸುವಂತಹ ಅನೇಕ ಘಟನೆಗಳು ನಡೆದಿವೆ. ಹಾಗೆಯೆ ಅವರ ಜೀವಿತದ ಅಂತಿಮ ದಿನಗಳಲ್ಲಿ ಕೂಡ ಅವರ ಕರುಣೆ ಹಾಗೂ ಆಧ್ಯಾತ್ಮಿಕ ಶಕ್ತಿ ಹೆಚ್ಚಿನ ಮಟ್ಟದಲ್ಲಿ ಪ್ರಕಾಶಿತವಾಗಿದ್ದನ್ನು ನಾವು ಗಮನಿಸಬಹುದು. ಅಂತಹ ಕೆಲವು ಘಟನೆಗಳನ್ನು ನಾವು ಇಲ್ಲಿ ನೋಡೋಣ:

ಶ್ರೀರಾಮಕೃಷ್ಣರು ತಮ್ಮ ನಿರ್ಯಾಣದ ಕೆಲವು ವರ್ಷಗಳ ಮುಂಚೆಯೇ ಶ್ರೀಮಾತೆಯವರ ಬಳಿ ತಮ್ಮ ದೇಹಾವಸಾನದ ಬಗ್ಗೆ ಕೆಲವು ಸ್ಪಷ್ಟವಾದ ಸೂಚನೆಗಳನ್ನು ನೀಡಿದ್ದರು. ಅವರು ಶ್ರೀಮಾತೆಯವರಿಗೆ ಹೀಗೆ ಹೇಳಿದ್ದರು: "ನೋಡು, ನಾನು ಎಂದು ಕಂಡಕಂಡವರ ಕೈಯಿಂದ ಊಟ ಮಾಡುತ್ತೇನೋ, ಕಲ್ಕತ್ತೆಯಲ್ಲಿ ರಾತ್ರಿಯನ್ನು ಕಳೆಯುತ್ತೇನೊ ಮತ್ತು ನನ್ನ ಪಾಲಿನ ಆಹಾರದಲ್ಲಿ ಒಂದು ಪಾಲನ್ನು ಬೇರೆಯವರಿಗೆ ಕೊಟ್ಟು ಉಳಿದುದನ್ನು ತಿನ್ನುತ್ತೇನೊ, ಆಗ ತಿಳಿದುಕೊ, ನನ್ನ ದೇಹತ್ಯಾಗಕ್ಕೆ ಹೆಚ್ಚು ತಡವಿಲ್ಲ ಎಂದು."

> ಶ್ರೀರಾಮಕೃಷ್ಣರ ಅಂತಿಮ ದಿನಗಳು ಅವತಾರ ಲೀಲೆಯ ಉದ್ದೇಶ ಸುಸಂಪನ್ನವಾದ ಪುಣ್ಯದಿನಗಳು; ಅವರ ಹೆಸರಿನ ಸಂಘಟನೆಯೊಂದು ರೂಪುಗೊಂಡ ಮಹತ್ವದ ದಿನಗಳು. ಆ ದಿನಗಳಲ್ಲಿ ಜರುಗಿದ ಚೇತೋಹಾರಿ ಘಟನೆಗಳ ಚಿತ್ರಣ ನೀಡಿರುವ ಸ್ವಾಮೀಜಿಯವರು ಮಂಗಳೂರಿನ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀರಾಮಕೃಷ್ಣರು ತಮ್ಮ ೪೯ನೇ ವಯಸ್ಸಿನವರೆಗೆ ಆಹಾರದ ವಿಷಯದಲ್ಲಿ ಕಟ್ಟುನಿಟ್ಟಾಗಿ ಇದ್ದರು. ಆದರೆ ಜೀವಿತದ ಕೊನೆಗೆ ಈ ನಿಯಮಗಳನ್ನು ಉಲ್ಲಂಘಿಸಿದ್ದರು. ಸೆಪ್ಟೆಂಬರ್ ೧೮೮೫ ರ ವೇಳೆಗೆ ಶ್ರೀರಾಮಕೃಷ್ಣರ ಗಂಟಲಿನಲ್ಲಿ ಕ್ಯಾನ್ಸರ್ ಕಾಣಿಸಿಕೊಂಡಿತು. ಅದರ ಚಿಕಿತ್ಸೆಗೆಂದು ಅವರ ಭಕ್ತರು ಶ್ರೀರಾಮಕೃಷ್ಣರನ್ನು ದಕ್ಷಿಣೇಶ್ವರದಿಂದ ಕೊಲ್ಕತಾಗೆ ಕರೆದುಕೊಂಡು ಬಂದರು. ಇದನ್ನು ಅವರ ಜೀವನದ ಸಂಧ್ಯೆಯ ಪ್ರಾರಂಭ ಎನ್ನಬಹುದು. ಶ್ರೀರಾಮಕೃಷ್ಣರಿಗೋಸುಗ ಗೊತ್ತುಮಾಡಿದ್ದ ಮನೆ ಬಹಳ ಚಿಕ್ಕದಾಗಿದ್ದರಿಂದ ಅವರು ಅಲ್ಲಿರಲಾರದೆ, ತಮ್ಮ ಪ್ರಿಯಭಕ್ತನಾದ ಬಲರಾಮ ಬಸುವಿನ ಮನೆಗೆ ಬಂದರು; ಅಲ್ಲಿ ಒಂದು ವಾರವಿದ್ದರು. ಬಲರಾಮನ ಮನೆಯಲ್ಲಿ ಅವರಿದ್ದ ಒಂದು ವಾರ, ಉತ್ಸವವಾಗಿ ಪರಿಣಮಿಸಿತು. ಶ್ರೀರಾಮಕೃಷ್ಣರು ಕೊಲ್ಕತಾಗೆ ಬಂದಿರುವ ಸುದ್ದಿ ತಿಳಿದು ಅವರ ಭಕ್ತರು, ಶಿಷ್ಯರು ಎಲ್ಲರೂ ತಂಡೋಪತಂಡವಾಗಿ ಬಂದು ಅವರ ದರ್ಶನ ಪಡೆದು ಧನ್ಯರಾದರು.

ಇಷ್ಟರಲ್ಲಿ ಶ್ಯಾಮಪುಕುರವೆಂಬ ಬಡಾವಣೆಯಲ್ಲಿ ಶ್ರೀರಾಮಕೃಷ್ಣರ ವಾಸಕ್ಕೆ ಯೋಗ್ಯವಾದ ಒಂದು ಮನೆಯನ್ನು ಹುಡುಕ

ಲಾಯಿತು. ಅಲ್ಲಿಗೆ ಶ್ರೀರಾಮಕೃಷ್ಣರು ಬಂದ ನಂತರ ಆಗಿನ ಕಾಲದ ಹೆಸರಾಂತ ಹೋಮಿಯೋಪತಿ ಡಾಕ್ಟರ್ ಮಹೇಂದ್ರಲಾಲ್ ಸರ್ಕಾರ್ ಎಂಬುವವರನ್ನು ಅವರ ಚಿಕಿತ್ಸೆಗೆ ನೇಮಿಸಲಾಯಿತು. ಈ ಮನೆಯಲ್ಲಿ ಶ್ರೀರಾಮಕೃಷ್ಣರು ಸುಮಾರು ನಾಲ್ಕು ತಿಂಗಳು ಇದ್ದರು. ಆಗ ಅಲ್ಲಿ ಅವರಿಗೆ ವಿವಿಧ ರೀತಿಯ ಚಿಕಿತ್ಸೆಗಳ ಏರ್ಪಾಡು ಮಾಡಲಾಯಿತು. ಮೊದಮೊದಲು ಕಾಯಿಲೆ ಗುಣ ವಾದಂತೆ ಕಂಡರೂ ದಿನದಿಂದ ದಿನಕ್ಕೆ ಉಲ್ಬಣವಾಗುತ್ತಲೇ ಹೋಯಿತು.

ಶ್ರೀರಾಮಕೃಷ್ಣರು ಈಗ ಸದಾ ಕಾಲವೂ ಕೊಲ್ಕತಾದಲ್ಲಿಯೇ ಇರುವುದರಿಂದ ಅನೇಕ ಹೊಸ ಭಕ್ತರು ಅವರ ಬಳಿ ಬರು ವಂತಾಯಿತು. ಅಂತೆಯೇ ಹಳೆಯ ಭಕ್ತರಿಗೆ ಶ್ರೀರಾಮಕೃಷ್ಣರನ್ನು ಇನ್ನೂ ಹೆಚ್ಚು ಹತ್ತಿರದಿಂದ ನೋಡಿ, ಅವರ ಸೇವೆ ಮಾಡಿ, ಅವರ ಮಹಿಮೆಯನ್ನು ಹೆಚ್ಚು ಹೆಚ್ಚು ಅರಿಯುವ ಅವಕಾಶವೂ ಸಿಕ್ಕಿತು. ಇದರ ಉಪಯೋಗವನ್ನು ಭಕ್ತರು ಚೆನ್ನಾಗಿಯೇ ಮಾಡಿಕೊಂಡರು. ಹೀಗಾಗಿ, ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಶಕ್ತಿ ಯನ್ನು ವ್ಯಕ್ತಗೊಳಿಸುವಂತಹ ಮತ್ತು ಅವರ ಅಲೌಕಿಕ ದರ್ಶನ ವನ್ನು ಪರಿಚಯಿಸುವಂತಹ ಅನೇಕ ಅದ್ಭುತ ಘಟನೆಗಳು ಆ ಮನೆಯಲ್ಲಿ ನಡೆದವು. ಅವುಗಳಲ್ಲಿ ಕೆಲವನ್ನು ಇಲ್ಲಿ ಸ್ಮರಿಸ ಬಹುದು.

ದುರ್ಗಾಪೂಜೆ ಎಂದರೆ ವಿಶೇಷವಾಗಿ ಬಂಗಾಳದಲ್ಲಿ ಎಲ್ಲೆಲ್ಲೂ ಸಂಭ್ರಮ, ಸಡಗರ, ಆನಂದ. ಆ ದಿನಗಳು ಆಬಾಲ ವೃದ್ಧರೆಲ್ಲರೂ ಸಡಗರದಿಂದಿರುವ ದಿನಗಳು. ಶ್ರೀರಾಮಕೃಷ್ಣರ ಪರಮ ಭಕ್ತನಾದ ಸುರೇಂದ್ರ ತನ್ನ ಮನೆಯಲ್ಲಿ ದುರ್ಗಾ ಪೂಜೆಯ ವ್ಯವಸ್ಥೆ ಮಾಡಿದ್ದಾನೆ; ಶ್ರೀರಾಮಕೃಷ್ಣರು ಅನಾರೋಗ್ಯದ ಕಾರಣ ತನ್ನ ಮನೆಗೆ ಬರಲಾಗುತ್ತಿಲ್ಲವೆಂಬ ದುಃಖದಿಂದ ಬಳಲುತ್ತಿದ್ದಾನೆ. ಸಪ್ತಮಿ ಕಳೆದು ಅಷ್ಟಮಿ ಬಂದಿದೆ. ಅಂದು ಶ್ರೀರಾಮಕೃಷ್ಣರ ದರ್ಶನ ಪಡೆಯಲು ಅನೇಕ ಭಕ್ತರು ಶ್ಯಾಮ ಪುಕುರದ ಮನೆಗೆ ಬಂದಿದ್ದಾರೆ. ನರೇಂದ್ರನೇ ಮೊದಲಾದ ಯುವಕ ಭಕ್ತರು ಸಹ ಅಲ್ಲಿ ಸೇರಿದ್ದಾರೆ. ಶ್ರೀರಾಮಕೃಷ್ಣರ ಆದೇಶದ ಮೇರೆಗೆ ನರೇಂದ್ರ ಹಾಡಲಾರಂಭಿಸಿದ್ದಾನೆ. ಅವನ ಗಾನವನ್ನು ಆಲಿಸುತ್ತಾ ಶ್ರೀರಾಮಕೃಷ್ಣರು ಗಾಢ ಸಮಾಧಿಗೆ ಹೋದರು. ಅಲ್ಲಿಂದ ಇಳಿದುಬಂದ ನಂತರ, ತಮಗಾದ ದರ್ಶನವನ್ನು ಭಕ್ತರಿಗೆ ಹೀಗೆ ಹೇಳಿದರು: "ಇಲ್ಲಿಂದ (ತಮ್ಮ ಶರೀರದಿಂದ) ಸುರೇಂದ್ರನ ಮನೆಯವರೆಗೆ ಬೆಳಕಿನ ಒಂದು ಮಾರ್ಗ ತೆರೆದುಕೊಂಡಿದ್ದನ್ನು ಕಂಡೆ. ಆತನ ಭಕ್ತಿಯ ಉತ್ಕಟತೆ ಯಿಂದಾಗಿ ಅಲ್ಲಿರಿಸಿರುವ ವಿಗ್ರಹದಲ್ಲಿ ಜಗನ್ಮಾತೆ ಆವಿರ್ಭಾವ ಗೊಂಡಿದ್ದಾಳೆ. ಆಕೆಯ ಹಣೆಗಣ್ಣಿನಲ್ಲಿ ಬೆಳಕಿನ ಕಿರಣಗಳು ಹೊಮ್ಮುವುದನ್ನು ನಾನು ನೋಡಿದೆ. ಮನೆಯ ಮುಂದಿನ ಹಜಾರದಲ್ಲಿ ಒಂದು ದೀಪವನ್ನು ಹಚ್ಚಿಡಲಾಗಿದೆ. ಒಳಗೆ ದೇವಿಯ ಮುಂದೆ ಕುಳಿತು ಸುರೇಂದ್ರ ವ್ಯಾಕುಲತೆಯಿಂದ 'ಅಮ್ಮಾ, ಅಮ್ಮಾ' ಅಂತ ಕೂಗುತ್ತ ರೋದಿಸುತ್ತಿದ್ದಾನೆ. ನೀವೆಲ್ಲ ಈಗಲೇ ಅವನ ಮನೆಗೆ ಹೋಗಿ. ನಿಮ್ಮನ್ನು ಕಂಡರೆ ಅವನಿಗೆ ಎಷ್ಟೋ ಸಮಾಧಾನವಾಗುತ್ತದೆ." ಅಂತೆಯೇ ಭಕ್ತರೆಲ್ಲರೂ ಸುರೇಂದ್ರನ ಮನೆಗೆ ಹೋಗಿ ನೋಡಿದಾಗ, ಶ್ರೀರಾಮಕೃಷ್ಣರ ದರ್ಶನಕ್ಕೂ ಅಲ್ಲಿರುವುದಕ್ಕೂ ತಾಳೆಯಾಗಿರುವುದನ್ನು ಕಂಡು ಅವರೆಲ್ಲರೂ ಆನಂದಾಶ್ಚರ್ಯಗಳಿಂದ ವಿಸ್ಮಿತರಾದರು.

ಕೆಲವು ವಾರಗಳು ಕಳೆದವು. ಶ್ರೀರಾಮಕೃಷ್ಣರು ವರಾಭಯ ರಾಗುವ ಘಟನೆಯು ನಡೆಯಿತು. ಅಂದು ಕಾಳೀ ಪೂಜೆ. ಶ್ರೀರಾಮಕೃಷ್ಣರು ತಮ್ಮ ಶಿಷ್ಯರಿಗೆ ಸರಳವಾದ ಪೂಜೆಗೆ ವ್ಯವಸ್ಥೆ ಮಾಡುವಂತೆ ಹೇಳಿದ್ದರು. ಭಕ್ತರೆಲ್ಲರೂ ಶ್ರೀರಾಮಕೃಷ್ಣರ ಕೋಣೆಯಲ್ಲಿ ನೆರೆದಿದ್ದಾರೆ. ಶ್ರೀರಾಮಕೃಷ್ಣರನ್ನು ಒಳಗೊಂಡು ಎಲ್ಲರೂ ಮೌನವಾಗಿದ್ದಾರೆ. ಇದ್ದಕ್ಕಿದ್ದ ಹಾಗೆ ಗಿರೀಶನ ಹೃದಯ ದಲ್ಲಿ ಅಪೂರ್ವವಾದ ಶ್ರದ್ಧೆ ಜಾಗೃತವಾಯಿತು. ಶ್ರೀರಾಮಕೃಷ್ಣರು ಸಾಕ್ಷಾತ್ ಕಾಳಿಯಾಗಿ ತಮ್ಮ ಪೂಜೆಯನ್ನು ಸ್ವೀಕರಿಸಲು ಕಾಯು ತ್ತಿದ್ದಾರೆಂದು ಗಿರೀಶನಿಗೆ ಅನ್ನಿಸಿತು. ಅವನು ಭಾವಾವೇಶದಿಂದ 'ಜೈ ಮಾ, ಜೈ ಮಾ' ಎನ್ನುತ್ತಾ ಗಂಧಪುಷ್ಪಗಳಿಂದ ಶ್ರೀರಾಮಕೃಷ್ಣ ರನ್ನು ಅರ್ಚಿಸಿದನು. ಅವನನ್ನೇ ಉಳಿದವರೆಲ್ಲರೂ ಅನುಸರಿಸಿದರು. ಶ್ರೀರಾಮಕೃಷ್ಣರ ಭಾವದಲ್ಲಿಯೂ ಸಹ ಅದ್ಭುತ ಪರಿವರ್ತನೆಯಾಗಿ, ಅವರು ಗಾಢ ಸಮಾಧಿಗೆ ಹೋದರು. ಸಮಾಧಿಯಿಂದ ಕೆಳಗೆ ಬಂದ ನಂತರ ಭಕ್ತರನ್ನು ಉದ್ದೇಶಿಸಿ, "ನಿಮ್ಮ ಭಕ್ತಿಶ್ರದ್ಧೆಗಳು ವರ್ಧಿಸಲಿ" ಎಂದು ಹರಸಿದರು. ಅಂದು ಶ್ರೀರಾಮಕೃಷ್ಣರು ನಿಜಕ್ಕೂ ಅಭಯ ವರವನ್ನು ಕೊಡುವ ಜಗನ್ಮಾತೆಯಂತಾದರು.

ಅದೇ ಶ್ಯಾಮಪುಕುರದ ಮನೆಯಲ್ಲಿ ಪ್ರಭುದಯಾಲ ಮಿಶ್ರ ಎಂಬುವನಿಗೆ ಕ್ರಿಸ್ತನ ದರ್ಶನ ನೀಡಿ, ಶ್ರೀರಾಮಕೃಷ್ಣರು ಅವನನ್ನು ಹರಸಿದರು. ಅಲ್ಲದೆ, ಇನ್ನೂ ಅನೇಕ ಭಕ್ತರು, ಪತಿತರು, ದೀನರು, ಮಹಿಳೆಯರು ಎಲ್ಲರೂ ಬಂದು ಶ್ರೀರಾಮಕೃಷ್ಣರ ದರ್ಶನ ಮತ್ತು ಉಪದೇಶಗಳಿಂದ ತಮ್ಮ ಜೀವನವನ್ನು ಪಾವನಗೊಳಿಸಿ ಕೊಂಡರು. ಇತ್ತ ಶ್ರೀರಾಮಕೃಷ್ಣರ ಆರೋಗ್ಯ ತುಂಬಾ ಕೆಡುತ್ತ ಬಂತು. ಅದಕ್ಕೆ, ಅವರ ಆರೈಕೆ ಮಾಡುತ್ತಿದ್ದ ಡಾ.ಮಹೇಂದ್ರ ಲಾಲ್ ಸರ್ಕಾರ್, "ಈಗ ತುಂಬ ಚಳಿಯ ವಾತಾವರಣ ವಾದ್ದರಿಂದ ಶ್ರೀರಾಮಕೃಷ್ಣರನ್ನು ಚೆನ್ನಾಗಿ ಗಾಳಿ-ಬೆಳಕು ಬರುವ ಊರ ಹೊರಗಿನ ತೋಟದ ಮನೆಗೆ ಕರೆದೊಯ್ದರೆ, ಅವರ ಆರೋಗ್ಯ ಸುಧಾರಿಸಬಹುದು" ಎಂದರು. ಅಂತೆಯೇ, ಶ್ರೀರಾಮ ಕೃಷ್ಣರನ್ನು ಡಿಸೆಂಬರ್ ೧೧, ೧೮೮೫ ರಂದು ಶ್ಯಾಮಪುಕುರ ದಿಂದ ಕಾಶೀಪುರದ ತೋಟದ ಮನೆಗೆ ಕರೆತರಲಾಯಿತು.

ಶ್ರೀರಾಮಕೃಷ್ಣರು ಈ ತೋಟದ ಮನೆಯಲ್ಲೇ ತಮ್ಮ ಲೀಲಾ ನಾಟಕಕ್ಕೆ ಅಂತಿಮರೂಪವನ್ನು ನೀಡಲಾರಂಭಿಸಿದರು. ತಮ್ಮ ಶಿಷ್ಯರಿಗೆಲ್ಲಾ ಸರಿಯಾದ ತರಬೇತಿ ನೀಡಿ, ಅದರಲ್ಲೂ ನರೇಂದ್ರನೇ ಮೊದಲಾದ ಯುವಶಿಷ್ಯರಿಗೆ ತಮ್ಮ ಲೋಕಶಿಕ್ಷಣದ ಜವಾಬ್ದಾರಿ ಯನ್ನು ವಹಿಸಿ, ತಾವು ಹೊರಡಲನುವಾದರು. ಶ್ರೀರಾಮಕೃಷ್ಣರ ಸೇವೆಯಲ್ಲಿ ತಮ್ಮನ್ನು ತಾವೇ ಸಮರ್ಪಿಸಿಕೊಂಡು, ನರೇಂದ್ರನ

ನೇತೃತ್ವದಲ್ಲಿ ತರುಣ ಶಿಷ್ಯರು ಘೋರತರ ಸಾಧನೆಯಲ್ಲಿ ತೊಡಗಿದರು. ಶ್ರೀರಾಮಕೃಷ್ಣರು ಅವರೆಲ್ಲರನ್ನೂ ಅತಿ ಶೀಘ್ರವಾಗಿ ಆಧ್ಯಾತ್ಮಿಕ ಮಾರ್ಗದ ಉನ್ನತ ಹಂತಗಳಿಗೆ ಕರೆದೊಯ್ದರು. ಶ್ರೀರಾಮಕೃಷ್ಣರು ಈ ತೋಟದ ಮನೆಯಲ್ಲಿಯೇ ತಮ್ಮ ಲೀಲಾ ಅಂತ್ಯದವರೆಗೆ ವಾಸವಾಗಿದ್ದುಕೊಂಡು, ತಮ್ಮ ಅಸೀಮ ಪ್ರೀತಿ, ಕರುಣೆ ಮತ್ತು ಆಧ್ಯಾತ್ಮಿಕ ಶಕ್ತಿಗಳನ್ನು ವ್ಯಕ್ತಗೊಳಿಸಿದರು. ಇಲ್ಲಿಯೇ ಅವರು ತಮ್ಮ ಗಂಟಲಿನಲ್ಲಿ ಆಗುತ್ತಿದ್ದ ಯಮಯಾತನೆಯನ್ನು ಸಹ ಲೆಕ್ಕಿಸದೆ, ಬಂದವರಿಗೆಲ್ಲ ಸೂಕ್ತ ಮಾರ್ಗದರ್ಶನ ನೀಡಿದರು. ಈ ತೋಟದಲ್ಲೇ ಶ್ರೀರಾಮಕೃಷ್ಣರು ಜನವರಿ ೧, ೧೮೮೬ ರಂದು ತಮ್ಮ ಭಕ್ತರೆಲ್ಲರನ್ನು "ನಿಮಗೆಲ್ಲ ಆಧ್ಯಾತ್ಮಿಕ ಜಾಗೃತಿ ಉಂಟಾಗಲಿ" ಎಂದು ಹರಸಿದರು. ಅಂದು ಅಲ್ಲಿ ನೆರೆದ ಭಕ್ತರಿಗೆ ಅನೇಕ ಆಧ್ಯಾತ್ಮಿಕ ಅನುಭವಗಳಾದವು. ಆ ದಿನ ಶ್ರೀರಾಮಕೃಷ್ಣರು ಭಕ್ತರ ಕಲ್ಪತರುವಾದರು.

ಶ್ರೀರಾಮಕೃಷ್ಣರ ಆರೋಗ್ಯ ಕ್ಷೀಣಿಸುತ್ತಿದೆ; ತಮ್ಮ ಜವಾಬ್ದಾರಿಯನ್ನೆಲ್ಲ ಶ್ರೀಮಾತೆ ಮತ್ತು ನರೇಂದ್ರನಿಗೆ ವಹಿಸಿ ಹೊರಡಲು ಅನುವಾಗುತ್ತಿದ್ದಾರೆ. ಕೆಲವರನ್ನು ಹೊರತುಪಡಿಸಿ ಇದನ್ನರಿಯುವ ಸಾಮರ್ಥ್ಯ ಯಾರಿಗೂ ಇರಲಿಲ್ಲ. ಇನ್ನು ಕೆಲವೇ ದಿನ ಬಾಕಿ ಇರುವಾಗ ಶ್ರೀರಾಮಕೃಷ್ಣರು ಶ್ರೀಮಾತೆಯವರ ಬಳಿ, "ನೋಡು, ಎಲ್ಲ ನಾನೊಬ್ಬನೇ ಮಾಡಬೇಕೆ? ನೀನೂ ಸಹ ಮಾಡಬೇಕು. ಕಲ್ಕತ್ತದ ಜನ ಕ್ರಿಮಿಗಳಂತೆ ಕತ್ತಲಲ್ಲಿ ತೊಳಲುತ್ತಿದ್ದಾರೆ, ನೀನು ಅವರನ್ನೆಲ್ಲ ನೋಡಿಕೊಳ್ಳಬೇಕು..." ಎಂದರು. ಶ್ರೀಮಾತೆಯವರು ಆಶ್ವಾಸನೆ ನೀಡುತ್ತಾ ಹೇಳುತ್ತಾರೆ, "ಸಮಯ ಬಂದಾಗ ಎಲ್ಲ ನಡೆಯುತ್ತದೆ." ಆಗ ಶ್ರೀರಾಮಕೃಷ್ಣರಿಗೆ ನೆಮ್ಮದಿಯಾಯಿತು.

ತಮ್ಮ ದೇಹತ್ಯಾಗಕ್ಕಿಂತ ೩-೪ ದಿವಸಗಳ ಮುಂಚೆ, ನರೇಂದ್ರನನ್ನು ಕರೆಸಿ ತಮ್ಮ ತಪಶ್ಶಕ್ತಿಯನ್ನೆಲ್ಲ ಧಾರೆಯೆರೆದು, "ನಾನು ಇಂದು ನನ್ನ ಆಧ್ಯಾತ್ಮಿಕ ಶಕ್ತಿಯನ್ನೆಲ್ಲ ನಿನಗೆ ನೀಡಿ ಫಕೀರನಾದೆ. ಇದರ ಶಕ್ತಿಯಿಂದ ನೀನು ಲೋಕಕಲ್ಯಾಣ ಕಾಯಕವನ್ನು ಮಾಡಬೇಕು" ಎಂದು ಶ್ರೀರಾಮಕೃಷ್ಣರು ಹೇಳಿದರು. ಹಾಗೆಯೇ ಯುವಶಿಷ್ಯರನ್ನೆಲ್ಲ ನರೇಂದ್ರನಿಗೆ ಒಪ್ಪಿಸಿ, "ಇವರುಗಳನ್ನೆಲ್ಲ ನೋಡಿಕೊ" ಎಂದರು.

ಕ್ಯಾನ್ಸರ್ ವ್ಯಾಧಿಯಿಂದ ನರಳುತ್ತಿದ್ದರೂ ಶ್ರೀರಾಮಕೃಷ್ಣರು ಹೇಳುತ್ತಿದ್ದರು: "ನಿಮಗಾಗಿ ಈ ನೋವನ್ನೆಲ್ಲ ಕಷ್ಟದಿಂದ ಸಹಿಸಿದ್ದೇನೆ. ಇಲ್ಲದಿದ್ದರೆ ನೀವೆಲ್ಲ ಅಳುತ್ತೀರಿ... ರೋಗ ಶರೀರಕ್ಕೆ ಮಾತ್ರ. ಹಾಗಾಗುವುದು ಸ್ವಾಭಾವಿಕ. ಅದು ಜಡದ ಮುದ್ದೆ ಎಂಬುದು ನನಗೆ ಚೆನ್ನಾಗಿ ತಿಳಿದಿದೆ. ಈಶ್ವರನು ನಾನಾ ರೂಪಗಳನ್ನು ಧರಿಸುತ್ತಾನೆ. ಅವುಗಳಲ್ಲಿ ಈ ಶರೀರವೂ ಒಂದು... ಎಲ್ಲವೂ ಅವನೇ ಆಗಿದ್ದಾನೆ. ಮನುಷ್ಯ, ಪ್ರಾಣಿ, ತೋಟ, ಬೀದಿ ಎಲ್ಲವೂ ಅವನೇ. ಯಜಮಾನ, ಯಜ್ಞ, ಯಜ್ಞಪಶು, ಯೂಪಸ್ತಂಭ ಎಲ್ಲವೂ ಅವನೇ." ಹೀಗೆ ಹೇಳುತ್ತಾ ಹೇಳುತ್ತಾ ಸಮಾಧಿಸ್ಥರಾಗಿ, ಸ್ವಲ್ಪಕಾಲದ ಮೇಲೆ ಮೈತಿಳಿದು "ಈಗೇನೂ ಯಾತನೆ ಇಲ್ಲ, ಸಂಪೂರ್ಣ ಸುಖವಾಗಿದ್ದೇನೆ" ಎಂದರು.

ಶ್ರೀರಾಮಕೃಷ್ಣರು ಹಲವಾರು ಬಾರಿ ತಮ್ಮ ಅನೇಕ ಭಕ್ತರು ಮತ್ತು ಶಿಷ್ಯರ ಬಳಿ, ತಾವು ಈ ಜಗತ್ತಿಗೆ ಧರ್ಮಗ್ಲಾನಿಯನ್ನು ಕಳೆಯಲು ಬಂದ ಸಚ್ಚಿದಾನಂದ ಭಗವಂತ ಎಂದು ಹೇಳಿದ್ದರು. ಆದರೆ ಅದನ್ನು ಅಂತಿಮವಾಗಿ ನರೇಂದ್ರನ ಮೂಲಕ ಸಾರಬೇಕಿತ್ತು. ಅದಕ್ಕೆ ಅವಕಾಶ ಬೇಕಿತ್ತು. ಇನ್ನೇನು ದೇಹಾವಸಾನಕ್ಕೆ ೨-೩ ದಿನಗಳ ಬಾಕಿ ಇದೆ. ಶ್ರೀರಾಮಕೃಷ್ಣರ ದೇಹದಲ್ಲಿ ಯಾವುದೇ ಶಕ್ತಿಯಿಲ್ಲ. ಒಂದು ಮಗ್ಗಲಿನಿಂದ ಇನ್ನೊಂದು ಮಗ್ಗಲಿಗೆ ತಿರುಗಬೇಕಾದರೂ ಸಹ ಇನ್ನೊಬ್ಬರ ಸಹಾಯ ಬೇಕು, ಅಷ್ಟು ನಿತ್ರಾಣರಾಗಿದ್ದಾರೆ. ಅಂದು ನರೇಂದ್ರ ಶ್ರೀರಾಮಕೃಷ್ಣರ ಹಾಸಿಗೆಯ ಬಳಿ, ಪಾದದ ಹತ್ತಿರ ಕುಳಿತಿದ್ದಾನೆ. ಶ್ರೀರಾಮಕೃಷ್ಣರ ಈ ಸ್ಥಿತಿಯನ್ನು ನೋಡಿ ಎಲ್ಲರೂ ಸಹ ಚಿಂತಾಕ್ರಾಂತರಾಗಿದ್ದಾರೆ. ಅವರ ಈ ಅಸ್ಥಿಪಂಜರದಂತಹ ದೇಹವನ್ನು ನೋಡಿ ನರೇಂದ್ರನ ಮನಸ್ಸಿನಲ್ಲಿ ಒಂದು ಭಾವನೆ ಸುಳಿಯಿತು: "ನಿಜಕ್ಕೂ ಇವರು ಅವತಾರಪುರುಷರೇ? ತಾವು ಅವತಾರ ಎಂದು ಎಷ್ಟೋ ಬಾರಿ ಸಾರಿದ್ದಾರೆ, ಎಷ್ಟೋ ಜನ ಬೇರೆಯವರೂ ಹಾಗೆ ಹೇಳುತ್ತಿದ್ದಾರೆ. ಆದರೆ ನನಗಿನ್ನೂ ಪೂರ್ತಿ ಒಪ್ಪಿಗೆಯಾಗಿಲ್ಲ. ಆದರೆ ಈಗ, ತಮ್ಮ ಶರೀರ ಯಾವ ಕ್ಷಣದಲ್ಲಾದರೂ ಬಿದ್ದು ಹೋಗಬಹುದು ಎನ್ನುವ ಈ ಅವಸ್ಥೆಯಲ್ಲಿ, ಇವರು ತಾವು ಸ್ವಯಂ ಭಗವಂತನ ಅವತಾರವೇ ಎಂದು ಹೇಳಲಿ. ಆಗ ನಾನು ನಂಬುತ್ತೇನೆ." ಆಶ್ಚರ್ಯವೆಂದರೆ ನರೇಂದ್ರನ ಮನಸ್ಸಿನಲ್ಲಿ ಈ ಸಂಶಯ ಸುಳಿದದ್ದೇ ತಡ, ಶ್ರೀರಾಮಕೃಷ್ಣರು ತಮ್ಮ ಶರೀರದಲ್ಲಿರುವ ಶಕ್ತಿಯನ್ನೆಲ್ಲ ಒಗ್ಗೂಡಿಸಿಕೊಂಡು ನರೇಂದ್ರನನ್ನು ಉದ್ದೇಶಿಸಿ ದೃಢಸ್ವರದಿಂದ ಹೀಗೆ ಹೇಳಿದರು: "ನರೇನ್, ಇನ್ನೂ ನಂಬಿಕೆ ಬರಲಿಲ್ಲವೇ? ಇಗೊ ಹೇಳುತ್ತೇನೆ. ಹಿಂದೆ ಯಾರು ಶ್ರೀರಾಮನಾಗಿ ಬಂದಿದ್ದನೊ, ಯಾರು ಶ್ರೀಕೃಷ್ಣನಾಗಿ ಬಂದಿದ್ದನೊ ಅವನೇ ಈ ಶರೀರದಲ್ಲಿ ಶ್ರೀರಾಮಕೃಷ್ಣನಾಗಿ ಅವತರಿಸಿದ್ದಾನೆ. ಆದರೆ ಇದು ಕೇವಲ ನಿನ್ನ ವೇದಾಂತದ ದೃಷ್ಟಿಯಿಂದಲ್ಲ." ಹೀಗೆ ಶ್ರೀರಾಮಕೃಷ್ಣರು ನರೇಂದ್ರನನ್ನು ಉದ್ದೇಶವಾಗಿಟ್ಟುಕೊಂಡು, ಜಗತ್ತಿನ ಧರ್ಮಗ್ಲಾನಿಯನ್ನು ಕಳೆದು ಧರ್ಮವನ್ನು ಸ್ಥಾಪಿಸಲು ಬಂದ ಸ್ವಯಂ ಭಗವಂತನೇ ತಾವು ಎಂದು ಲೋಕಕ್ಕೆಲ್ಲಾ ಸಾರಿದರು.

ಹಲವು ದಿನಗಳ ಹಿಂದೆ, ಶ್ರೀರಾಮಕೃಷ್ಣರು ಶಿಷ್ಯರಿಗೆ ಹೇಳಿ ಪಂಚಾಂಗವನ್ನು ತರಿಸಿ, ತಮ್ಮ ದೇಹತ್ಯಾಗದ ದಿನವನ್ನು ತಾವೇ ನಿರ್ಧರಿಸಿದ್ದರು. ಅಂದು ೧೬.೮.೧೮೮೬ ರಂದು ಶ್ರೀರಾಮಕೃಷ್ಣರು ತಾವು ಮತ್ತೆ ತಿರುಗಿ ಬರಲಾರದಂತಹ ಮಹಾಸಮಾಧಿಗೇರಿದರು. ನಾಮರೂಪಗಳೆಂಬ ಕೋಶಗಳ ಬಂಧನಗಳನ್ನು ಕಳಚಿ ಅನಂತಾತ್ಮನಲ್ಲಿ ಐಕ್ಯವಾದರು; ದೇಶಕಾಲಗಳ ವ್ಯಾಪ್ತಿಯನ್ನು ಮೀರಿ ವಿಶ್ವವ್ಯಾಪಿಯಾದರು; ಆ ಮೂಲಕ ಎಲ್ಲರಿಗೂ ಎಲ್ಲಾ ಕಾಲಕ್ಕೂ ಸೇರಿದವರಾದರು.